**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**<u>Spl.C(SC/ST).No.: 2/2020</u>**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **13**
ಸಿ.ಡಬ್ಲ್ಯೂ ನಂಃ **13**
ಸಾಕ್ಷಿಯನ್ನು ದಿನಾಂಕಃ **12-08-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಹನುಮಪ್ಪ |
| ತಂದೆಯ ಹೆಸರು | ಃ | ಹನುಮಪ್ಪ |
| ವಯಸ್ಸು | ಃ | **65** ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ ಸ್ಥಳ | ಃ | ತಿಗರಿ |

<u>ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ</u>

ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ನಮ್ಮ ಊರಿನವರು ಹಾಗೂ ಊರಿನ ಹಿರಿಯರು. ನಮ್ಮ ಊರಿನಲ್ಲಿ ಫಕೀರೇಶ್ವರ ದೇವಸ್ಥಾನ ಇದೆ. ಪ್ರತಿ ವರ್ಷ ಫಕೀರೇಶ್ವರ ಜಾತ್ರೆ ಸಮಯ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ನಿಯೋಜನೆ ಮಾಡಲಾಗುತ್ತಿತ್ತು. ಈಗ ಸಾಮೂಹಿಕ ಮದುವೆಗಳನ್ನು ಆಯೋಜನೆ ಮಾಡುತ್ತಿಲ್ಲ. **2019** ರಲ್ಲೂ ಸಹಾ ಜಾತ್ರೆ ಸಮಯ ಸಾಮೂಹಿಕ ಮದುವೆಗಳ ಮಾಡಬೇಕೆಂದು ನಿರ್ಧಾರ ಮಾಡಲಾಗಿತ್ತು. ಒಟ್ಟು **25** ಜೋಡಿಗಳು ನೋಂದಾಯಿಸಿಕೊಂಡಿದ್ದು, ಅದರಲ್ಲಿ **4** ಜೋಡಿ ಮಾದಿಗ ಜನಾಂಗಕ್ಕೆ ಸೇರಿದವರಾಗಿದ್ದರು. **2019** ರಲ್ಲಿ ಎಲ್ಲರೂ ಸೇರಿ ಮದುವೆಗಳನ್ನು ಮಾಡಿದರು. ನಮ್ಮ ಮಂದಿಯ ಮದುವೆಗಳನ್ನು ನಮ್ಮ ಕೇರಿಯಲ್ಲಿ ಮಾಡಿಕೊಂಡೆವು. ಮದುವೆಯಾದ ನಂತರ ಆ ದಿನ ಯಾರು ಏನು ಮಾತುಕತೆಯಾಯಿತು ಎಂದು ಗೊತ್ತಿಲ್ಲ. ಯಾರು ಯಾರಿಗೆ ಏನು ಹೇಳಿದರು ಇತ್ಯಾದಿ ವಿಚಾರಗಳು ನನಗೆ ಗೊತ್ತಿಲ್ಲ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಕೋರಿಕೆ ಮೇರೆಗೆ ಸದರಿ ಸಾಕ್ಷಿದಾರನನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

**3).** ದಿಃ **27-8-2019** ರಂದು ಬೆಳಿಗ್ಗೆ **8** ಗಂಟೆ ಸುಮಾರಿಗೆ ಆರೋಪಿಗಳು ಬಂದು

ನಮ್ಮ ಜನಂಾಗದವರ ಮದುವೆಗಳನ್ನು ಫಕೀರೇಶ್ವರ ದೇವಸ್ಥಾನದ ಬಳಿ ಮಾಡುವುದು ಬೇಡಾ ನಿಮ್ಮ ಕೇರಿಯಲ್ಲಿ ಮದುವೆಗಳನ್ನು ಮಾಡಿಕೊಂಡು ನಂತರ ಬಂದು ಜಾತ್ರೆಯಲ್ಲಿ ಊಟ ಮಾಡಿ ಎಂದು ತಿಳಿಸಿದರು ಎಂದರೆ ಸರಿಯಲ್ಲ. ನಂತರ ಅಂಬೇಡ್ಕರ ಭವನದ ಬಳಿ ಪೇಂಡಾಲ ಹಾಕಿ ನಮ್ಮ ಜನಾಂಗದ **4** ಜೋಡಿ ಮದುವೆಗಳನ್ನು ಮಾಡಿಸಿದೆವು ಎಂದರೆ ಸರಿ. ಆ ದಿನ ಮಧ್ಯಾಹ್ನ ಸುಮಾರು **12-00** ಗಂಟೆಗೆ ಮದುವೆಗಳು ಆದ ನಂತರ ಆರೋಪಿಗಳು ಸಮುದಾಯ ಭವನದ ಬಳಿ ಬಂದರು ಎಂದರೆ ಸರಿ. ನಾನು ಮತ್ತು  ಮುಖಂಡರು ಆರೋಪಿಗಳನ್ನು ವಿಚಾರಿಸಿ ನಮ್ಮ ಜನಾಂಗದವರಿಗೆ ಸಾಮೂಹಿಕ ಮದುವೆ ಕಾರ್ಯಕ್ರಮದಲ್ಲಿ ಏಕೆ ಮದುವೆ ಮಾಡಿಸಿಲ್ಲ ಎಂದು ಕೇಳಿದಾಗ ಅವರು ತಡೆದು ನಿಲ್ಲಿಸಿ ಅವಾಚ್ಯವಾಗಿ ಬೈಯ್ದರು ಎಂದರೆ ಸರಿಯಲ್ಲ.  ಅಲ್ಲದೇ ಜೀವ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ.  ಆರೋಪಿಗಳು ಊರಿನಲ್ಲಿ ಎಲ್ಲಾ ಮದುವೆಗಳನ್ನು ಒಟ್ಟಾಗಿ ನಡೆಸದೆ ಅಸ್ಪೃಷ್ಯತೆ ಆಚರಣೆ ಮಾಡಿರುತ್ತಾರೆ ಎಂದು ಆರೋಪಿಗಳ ವಿರುದ್ದ ಪೊಲೀಸರಿಗೆ "ನಾನು ತಿಗರಿ ಗ್ರಾಮದ . . . . ಬೆದರಿಕೆ ಹಾಕಿದ್ದು ಇರುತ್ತದೆ " ಎಂದು ನಿಪಿ **11** ರೀತ್ಯ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ನಾನು ಆಗ ಊರಿನಲ್ಲಿರಲಿಲ್ಲ. ಊರಿನಲ್ಲಿ ಜಗಳ ಏಕೆ ಬೇಕು ಎಂಬ ಕಾರಣಕ್ಕಾಗಿ ಹಾಗೂ ಊರಿನಲ್ಲಿ ಸೌಹಾರ್ದತೆ ಕಾಪಾಡಿಕೊಳ್ಳುವ ಸಲುವಾಗಿ ಹೇಳಿಕೆ ಕೊಡುವಾಗ ನಾನು ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ವೈಜೆಆರ್ ವಕೀಲರಿಂದ

**4).** **6** ಮತ್ತು **8** ನೇ ಆರೋಪಿಗಳು ವಾಲ್ಮೀಕಿ ಸಮಾಜದವರು ಎಂದರೆ ಸರಿ. ಮೊದಲಿನಿಂದಲೂ ಸಾರೆಮ್ಮ ದೇವಸ್ಥಾನದ ಬಳಿಯೇ ಮದುವೆ ಮಾಡಿಕೊಂಡು ಬಂದಿದ್ದೇವೆ ಎಂದರೆ ಸರಿ. ನಾವು ಮತ್ತು ಆರೋಪಿಗಳು ಚೆನ್ನಾಗಿಯೇ ಇದ್ದೇವೆ ನಮ್ಮ ಮಧ್ಯ ವೈಮನಸ್ಸು ಇರುವುದಿಲ್ಲ. ಸಾರೆಮ್ಮ ದೇವಸ್ಥಾನ ಹಳೆಯದಾದ್ದದ ಕಾರಣ ಊರಿನ ಹಿರಿಯರೇ ಅದನ್ನು ಹೊಸದಾಗಿ ಕಟ್ಟಿಸುತ್ತಿದ್ದಾರೆ ಎಂದರೆ ಸರಿ. ಈಗ ನಾವು ಮತ್ತು ಊರಿನವರೆಲ್ಲಾ ಹೊಂದಾಣಿಕೆಯಿಂದ ಇದ್ದೇವೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ

ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.

**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**Spl.C(SC/ST).No.: 2/2020**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂ: **12**
ಸಿ.ಡಬ್ಲ್ಯೂ ನಂ: **15**
ಸಾಕ್ಷಿಯನ್ನು ದಿನಾಂಕ: **12-08-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | : | ಗುಡದಪ್ಪ |
| ತಂದೆಯ ಹೆಸರು | : | ದ್ಯಾಮಪ್ಪ |
| ವಯಸ್ಸು | : | **43** ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ ಸ್ಥಳ | : | ತಿಗರಿ |

ಸಾಕ್ಷಿಯ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರವರಿಂದ

ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ನಮ್ಮ ಊರಿನವರು ಹಾಗೂ ಫಕೀರೇಶ್ವರ ದೇವಸ್ಥಾನದ ಸಮಿತಿಯವರು. ನಮ್ಮ ಊರಿನಲ್ಲಿ ಶಿರಹಟ್ಟಿ ಫಕೀರೇಶ್ವರ ದೇವಸ್ಥಾನ ಇದೆ. ಪ್ರತಿ ವರ್ಷ ಫಕೀರೇಶ್ವರ ಜಾತ್ರೆ ಸಮಯ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ನಿಜನೆ ಮಾಡಲಾಗಿರುತ್ತದೆ. **2019** ರಲ್ಲೂ ಸಹಾ ಜಾತೆ ಸಮಯ ಸಾಮೂಹಿಕ ಮದುವೆಗಳ ಮಾಡಬೇಕೆಂದು ನಿರ್ಧಾರ ಮಾಡಲಾಗಿತ್ತು. ಒಟ್ಟು **25** ಜೋಡಿಗಳು ನೋಂದಾಯಿಸಿಕೊಂಡಿದ್ದು, ಅದರಲ್ಲಿ **4** ಜೋಡಿ ಮಾದಿಗ ಜನಾಂಗಕ್ಕೆ ಸೇರಿದವರಾಗಿದ್ದರು.

**2).** ದಿ: **27-8-2019** ರಂದು ಆರೋಪಿಗಳು ತಿಳಿಸಿದ್ದೇನೆಂದರೆ - ನಿಮ್ಮ ಜನಾಂಗಕ್ಕೆ ಸೇರಿದ **4** ಜೋಡಿಗಳ ಮದುವೆ ಫಕೀರೇಶ್ವರ ದೇವಸ್ದಾನದ ಬಳಿ ಮಾಡುವುದು ಬೇಡಾ ಆ ಮದುವೆಗಳನ್ನು ನಿಮ್ಮ ಕೇರಿಯಲ್ಲಿ ಮಾಡಿಕೊಳ್ಳಿ ಎಂದು ಹೇಳಿದಾಗ ನಾವು ನಮ್ಮ ಕಾಲೋನಿಯಲ್ಲಿದ್ದ ಅಂಬೇಡ್ಕರ ಭವನದ ಬಳಿ ಪೆಂಡಾಲ ಹಾಕಿ ಮದುವೆಗಳನ್ನು ಮಾಡಿಸಿದೆವು. ಸಾರೆಮ್ಮ ದೇವಸ್ಥಾನ ಸಹಾ ಸದರಿ ಅಂಬೇಡ್ಕರ ಭವನದಲ್ಲಿದೆ. ಆ ನಂತರ ಏನು ಮಾತುಕತೆಯಾಯಿತು ಎಂದು ಗೊತ್ತಿಲ್ಲ. ಆಗ ನಾನು ಇರಲಿಲ್ಲ. ಯಾರು ಯಾರಿಗೆ ಏನು ಹೇಳಿದರು ಇತ್ಯಾದಿ ವಿಚಾರಗಳು ನನಗೆ ಗೊತ್ತಿಲ್ಲ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಕೋರಿಕೆ ಮೇರೆಗೆ ಸದರಿ ಸಾಕ್ಷಿದಾರನನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

**3).** ಆ ದಿನ ಮಧ್ಯಾಹ್ನ ಸುಮಾರು **12-00** ಗಂಟೆಗೆ ಮದುವೆಗಳು ಆದ ನಂತರ ಆರೋಪಿಗಳು ಸಮುದಾಯ ಭವನದ ಬಳಿ ಬಂದರು ಎಂದರೆ ಸರಿ. ನಾನು ಮತ್ತು ಮುಖಂಡರು ಆರೋಪಿಗಳನ್ನು ವಿಚಾರಿಸಿ ನಮ್ಮ ಜನಾಂಗದವರಿಗೆ ಸಾಮೂಹಿಕ ಮದುವೆ ಕಾರ್ಯಕ್ರಮದಲ್ಲಿ ಏಕೆ ಮದುವೆ ಮಾಡಿಸಿಲ್ಲ ಎಂದು ಕೇಳಿದಾಗ ಅವರು ತಡೆದು ನಿಲ್ಲಿಸಿ ಅವಾಚ್ಯವಾಗಿ ಬೈಯ್ದರು ಎಂದರೆ ಆಗ ನಾನು ಅಲ್ಲಿರಲಿಲ್ಲ. ಅಲ್ಲದೇ ಜೀವ ಬೆದರಿಕೆ ಹಾಕಿದರು ಎಂದರೆ ನಾನು ಅಲ್ಲಿರಲಿಲ್ಲ ಆದರೆ ಬೆದರಿಕೆ ಹಾಕಿದ್ದು ನಿಜ. ಆರೋಪಿಗಳು ಊರಿನಲ್ಲಿ ಎಲ್ಲಾ ಮದುವೆಗಳನ್ನು ಒಟ್ಟಾಗಿ ನಡೆಸದೆ ಅಸ್ಪೃಷ್ಯತೆ ಆಚರಣೆ ಮಾಡಿರುತ್ತಾರೆ ಎಂದು ಆರೋಪಿಗಳ ವಿರುದ್ಧ ಪೊಲೀಸರಿಗೆ **"**ನಾನು ತಿಗರಿ ಗ್ರಾಮದ . . . . ಬೆದರಿಕೆ ಹಾಕಿದ್ದು ಇರುತ್ತದೆ **"** ಎಂದು ನಿಪಿ **10** ರೀತ್ಯ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ನಾನು ಆಗ ಊರಿನಲ್ಲಿರಲಿಲ್ಲ. ಊರಿನಲ್ಲಿ ಜಗಳ ಏಕೆ ಬೇಕು ಎಂಬ ಕಾರಣಕ್ಕಾಗಿ ಹಾಗೂ ಊರಿನಲ್ಲಿ ಸೌಹಾರ್ದತೆ ಕಾಪಾಡಿಕೊಳ್ಳುವ ಸಲುವಾಗಿ ಹೇಳಿಕೆ ಕೊಡುವಾಗ ನಾನು ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ವೈಜೆಆರ್ ವಕೀಲರಿಂದ

**4).** **6** ಮತ್ತು **8** ನೇ ಆರೋಪಿಗಳು ವಾಲ್ಮೀಕಿ ಸಮಾಜದವರು ಎಂದರೆ ಸರಿ. ನಾನು ಮೂಲತಃ ತಿಗರಿ ಗ್ರಾಮದವನಲ್ಲ ಎಂದರೆ ಸರಿ. ಆರೋಪಿಗಳು ಬೆದರಿಕೆ ಹಾಕಿರಲಿಲ್ಲ ಎಂದರೆ ಸರಿಯಲ್ಲ. **4** ಜೋಡಿಗಳ ಮದುವೆ ಫಕೀರೇಶ್ವರ ದೇವಸ್ಥಾನದ ಬಳಿ ಮಾಡುವುದು ಬೇಡಾ ಎಂದು ಆರೋಪಿಗಳು ಹೇಳಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನಮ್ಮ ಮನೆಯವರ ಮದುವೆ ನಿಗದಿಯಾಗಿರಲಿಲ್ಲ. ಸಾರೆಮ್ಮ ದೇವಸ್ಥಾನದ ಬಳಿಯೇ ಅಂಬೇಡ್ಕರ ಭವನ ಕಟ್ಟಿದ್ದಾರೆ ಎಂದರೆ ಸರಿ. ಹಿಂದೆ ಎಲ್ಲಾ ಮದುವೆಗಳನ್ನು ಸಾರೆಮ್ಮ ದೇವಸ್ಥಾನದ ಬಳಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ **27-8-2019** ರಂದು ನಾನು ಊರಿನಲ್ಲಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ವೈಯಕ್ತಿಕ ಮಾಹಿತಿ ಇರದೇ ಇದ್ದರೂ ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.

**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**Spl.C(SC/ST).No.: 2/2020**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **11**
ಸಿ.ಡಬ್ಲ್ಯೂ ನಂಃ **14**
ಸಾಕ್ಷಿಯನ್ನು ದಿನಾಂಕಃ **12-08-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಮಾರುತಿ |
| ತಾಯಿಯ ಹೆಸರು | ಃ | ನೀಲವ್ವ |
| ವಯಸ್ಸು | ಃ | **40** ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ ಸ್ಥಳ | ಃ | ತಿಗರಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ನಮ್ಮ ಊರಿನವರು ಹಾಗೂ ಮುಖಂಡರು. ನಮ್ಮ ಊರಿನಲ್ಲಿ ಫಕೀರೇಶ್ವರ ದೇವಸ್ಥಾನ ಇದೆ. **2019** ರಲ್ಲಿ ಪ್ರತಿ ವರ್ಷ ಫಕೀರೇಶ್ವರ ಜಾತ್ರೆ ನಡೆಯುವಂತೆ ಜಾತ್ರೆ ನಡೆಯುತ್ತಿತ್ತು. ಆ ವರ್ಷ ಜಾತ್ರೆಯಲ್ಲಿ ಸಾಮೂಹಿಕ ಮದುವೆಗಳನ್ನು ಏರ್ಪಡಿಸಲಾಗಿತ್ತು. **25** ಜೋಡಿಗಳು ನೋಂದಾಯಿಸಿಕೊಂಡಿದ್ದು, ಅದರಲ್ಲಿ **4** ಜೋಡಿ ಮಾದಿಗ ಜನಾಂಗಕ್ಕೆ ಸೇರಿದವರಾಗಿದ್ದರು. ಮದುವೆ ದಿನ ಬೆಳಿಗ್ಗೆ **9** ರಿಂದ **9-30** ಗಂಟೆ ಸುಮಾರಿಗೆ ಆರೋಪಿಗಳು ತಿಳಿಸಿದ್ದೇನೆಂದರೆ - ನಿಮ್ಮ ಜನಾಂಗಕ್ಕೆ ಸೇರಿದ **4** ಜೋಡಿಗಳ ಮದುವೆ ಫಕೀರೇಶ್ವರ ದೇವಸ್ಥಾನದ ಬಳಿ ಮಾಡುವುದು ಬೇಡಾ ಆ ಮದುವೆಗಳನ್ನು ನಿಮ್ಮ ಕೇರಿಯಲ್ಲಿ ಮಾಡಿಕೊಂಡು ನಂತರ ಬಂದು ಜಾತ್ರೆಯಲ್ಲಿ ಊಟ ಮಾಡಿ ಎಂದು ಹೇಳಿದ್ದರು.

**2).** ಸಾಮೂಹಿಕ ಮದುವೆ ಎಂದರೆ ಎಲ್ಲಾ ಕೂಡಿ ಒಂದೇ ಕಡೆ ಫಕೀರೇಶ್ವರ ದೇವಸ್ಥಾನದಲ್ಲಿ ಆಗಬೇಕು ಎಂದು ನಾವು ಹೇಳಿದೆವು. ಆಗ ರೀತಿ ಆಗುವುದಿಲ್ಲ, ನಿಮ್ಮ ಮದುವೆಗಳನ್ನು ನಿಮ್ಮ ಕೇರಿಯಲ್ಲಿ ಮಾಡಿಕೊಳ್ಳಿ ನಮ್ಮ ಮದುವೆಗಳನ್ನು ಫಕೀರೇಶ್ವರ ದೇವಸ್ಥಾನದ ಬಳಿ ಮಾಡುತ್ತೇವೆ ಎಂದು ಹೇಳಿದರು. ನಂತರ ಎಸ್ ಸಿ ಕಾಲೋನಿ ಸಾರೆಮ್ಮ ದೇವಸ್ಥಾನ ಮತ್ತು ಅಂಬೇಡ್ಕರ ಸಮುದಾಯ ಭವನದ ಬಳಿ ಪೆಂಡಾಲ್ ಹಾಕಿ **4** ಜೋಡಿ ಮದುವೆಗಳನ್ನು ಮಾಡಿಸಿದೆವು. ನಂತರ ಮದುವೆಯಾದ

ಜೋಡಿಗಳನ್ನು ಫಕೀರೇಶ್ವರ ದೇವಸ್ಥಾನದ ಬಳಿ ಕರೆದುಕೊಂಡು ಹೋದೆವು.

**3).** ಮದುವೆಯಾದ ನಂತರ ನಮ್ಮ ಮುಖಂಡರು ಹಾಗೂ ಆರೋಪಿಗಳ ಮಧ್ಯ ಅಂಬೇಡ್ಕರ ಸಮುದಾಯ ಭವನದ ಬಳಿ ಮಾತುಕತೆಯಾಯಿತು. ಆದರೆ ಆ ಸಮಯ ನಾನು ಅಲ್ಲಿರಲಿಲ್ಲ. ಪೊಲೀಸರು ಆ ಜಾಗಕ್ಕೆ ಬಂದಿದ್ದರು ಆದರೆ ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಮಾಡಿಕೊಂಡಿರಲಿಲ್ಲ. ನಾನು ಆಗ ಅಲ್ಲಿರಲಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಗಕರು ಕೋರಿಕೆ ಮೇರೆಗೆ ಸದರಿ ಸಾಕ್ಷಿದಾರನನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

**4).** ಮಧ್ಯಾಹ್ನ ಸುಮಾರು **12-00** ಗಂಟೆಗೆ ನಾನು ಮತ್ತು ಮುಖಂಡರು ಆರೋಪಿಗಳನ್ನು ವಿಚಾರಿಸಿ ನಮ್ಮ ಜನಾಂಗದವರಿಗೆ ಸಾಮೂಹಿಕ ಮದುವೆ ಕಾರ್ಯಕ್ರಮದಲ್ಲಿ ಏಕೆ ಮದುವೆ ಮಾಡಿಸಿಲ್ಲ ಎಂದು ಕೇಳಿದಾಗ ಅವರು ತಡೆದು ನಿಲ್ಲಿಸಿ ಅವಾಚ್ಯವಾಗಿ ಬೈಯ್ದರು ಎಂದರೆ ಸರಿ. ಅಲ್ಲದೇ ಜೀವ ಬೆದರಿಕೆ ಹಾಕಿದರು ಎಂದರೆ ಸರಿ. ಬಹಿಷ್ಕಾರ ಸಹಾ ಹಾಕಿದರು ಎಂದು ಸಾಕ್ಷಿದಾರರು ನುಡಿದಿರುತ್ತಾರೆ. ಆರೋಪಿಗಳು ಊರಿನಲ್ಲಿ ಎಲ್ಲಾ ಮದುವೆಗಳನ್ನು ಒಟ್ಟಾಗಿ ನಡೆಸದೆ ಅಸ್ಪೃಷ್ಯತೆ ಆಚರಣೆ ಮಾಡಿರುತ್ತಾರೆ ಎಂದು ಆರೋಪಿಗಳ ವಿರುದ್ಧ ಪೊಲೀಸರಿಗೆ "ನಾನು ತಿಗರಿ ಗ್ರಾಮದ . . . . ಬೆದರಿಕೆ ಹಾಕಿದ್ದು ಇರುತ್ತದೆ " ಎಂದು ನಿಪಿ **9** ರೀತ್ಯ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ನಾನು ಆಗ ಊರಿನಲ್ಲಿರಲಿಲ್ಲ. ಊರಿನಲ್ಲಿ ಜಗಳ ಏಕೆ ಬೇಕು ಎಂಬ ಕಾರಣಕ್ಕಾಗಿ ಹಾಗೂ ಊರಿನಲ್ಲಿ ಸೌಹಾರ್ದತೆ ಕಾಪಾಡಿಕೊಳ್ಳುವ ಸಲುವಾಗಿ ಹೇಳಿಕೆ ಕೊಡುವಾಗ ನಾನು ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ವೈಜೆಆರ್ ವಕೀಲರಿಂದ

**5).** ನಾನು ಅನಕ್ಷರಸ್ಥ. ಶಾಲೆಗೆ ಹೋಗಿ ಕಲಿತಿಲ್ಲ. ಆ ದಿನ ಜಾತ್ರೆಯಲ್ಲಿ ನಮ್ಮ ಸಂಬಂಧಿಕರ ಮದುವೆ ನಿಗದಿಯಾಗಿರಲಿಲ್ಲ. **4** ಜೋಡಿಗಳ ಹೆಸರುಗಳನ್ನು ಪೊಲೀಸರಿಗೆ ತಿಳಿಸಿದ್ದಿರಾ ಎಂಬ ಪ್ರಶ್ನೆಗೆ ನಾನು ಆಗ ಅಲ್ಲಿರಲಿಲ್ಲ ಎಂದು ಸಾಕ್ಷಿದಾರರು ಉತ್ತರಿಸಿರುತ್ತಾರೆ. ದಿಃ **27-8-2019** ರಂದು ಬೆಳಿಗ್ಗೆ ಆರೋಪಿಗಳು ಫಕೀರೇಶ್ವರ ದೇವಸ್ಥಾನದ ಬಳಿ ನಮ್ಮ ಮದುವೆಗಳು ಮಾಡಿಕೊಳ್ಳಬೇಡಿ ಎಂದು ನೇರವಾಗಿ ಹೇಳಿದ್ದರು. ನನಗೆ ಈ ಕೇಸಿನ ಬಗ್ಗೆ ವೈಯಕ್ತಿಕ ಮಾಹಿತಿ ಇರದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. **6** ಮತ್ತು **8** ನೇ ಆರೋಪಿಗಳು ವಾಲ್ಮೀಕಿ ಸಮಾಜದವರು ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.

**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**<u>Spl.C(SC/ST).No.: 2/2020</u>**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂ: **10**
ಸಿ.ಡಬ್ಲ್ಯೂ ನಂ: **12**
ಸಾಕ್ಷಿಯನ್ನು ದಿನಾಂಕ: **12-08-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | : | ಸಣ್ಣ ಮೈಲಪ್ಪ |
| ತಾಯಿಯ ಹೆಸರು | : | ಮೈಲವ್ವ |
| ವಯಸ್ಸು | : | 77 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ ಸ್ಥಳ | : | ತಿಗರಿ |

<u>ಸಾಕ್ಷಿಯ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರವರಿಂದ</u>

ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ನಮ್ಮ ಊರಿನವರು. ನಮ್ಮ ಊರಿನಲ್ಲಿ ಪ್ರತಿ ವರ್ಷ ಫಕೀರೇಶ್ವರ ಜಾತ್ರೆ ನಡೆಯುತ್ತದೆ. ನಾವು ಮತ್ತು ಅವರು ಹಿಂದಿನಿಂದ ಮದುವೆಗಳನ್ನು ಮಾಡುತ್ತಾ ಬಂದಿದ್ದೇವೆ. ಈ ಕೇಸಿಗೆ ಸಂಬಂಧಪಟ್ಟಂತೆ ಆರೋಪಿಗಳು ನಮಗೆ ಏನೂ ಅಂದಿರಲಿಲ್ಲ. ಮದುವೆ ವಿಚಾರದಲ್ಲಿ ಆರೋಪಿಗಳು ತಕರಾರು ಮಾಡಿದ್ದರು ಎಂದು ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಗಕರು ಕೋರಿಕೆ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

<u>ಪಾಟೀ ಸವಾಲು: ಸರ್ಕಾರಿ ಅಭಿಯೋಜಕರಿಂದ:</u>

**2).** ಸುಮಾರು **2019** ರಲ್ಲಿ ದೇವಸ್ಥಾನ ಸಮಿತಿಯವರುಸ ಾಮೂಹಿಕ ವಿವಾಹ ಕಾರ್ಯಕ್ರಮ ಹಮ್ಮಿಕೊಂಡಿದ್ದರು ಎಂದರೆ ಸರಿ. ಸದರಿ ಸಾಮೂಹಿಕ ಮದುವೆ ಕಾರ್ಯಕ್ರಮದಲ್ಲಿ **25** ಜೋಡಿಗಳ ಮದುವೆ ನೊಂದಣಿಯಾಗಿದ್ದವು ಎಂದರೆ ಗೊತ್ತಿಲ್ಲ, ಆದರೆ ಮಾದಿಗ ಸಮುದಾಯಕ್ಕೆ ಸೇರಿದ **4** ಜೋಡಿಗಳ ಮದುವೆ ನೋಂದಣಿ ಆಗಿದ್ದವು ಎಂದರೆ ಸರಿ. ಆ **4** ಜೋಡಿ ಮದುವೆಗೆ ಸಂಬಂಧಪಟ್ಟಂತೆ ದೇವಸ್ಥಾನ ಸಮಿತಿಯವರಿಗೆ ಹಣ ಕೊಟ್ಟು ರಸೀದಿ ಪಡೆಯಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಿ: **27-8-2019** ರಂದು ಬೆಳಿಗ್ಗೆ **8** ಗಂಟೆ ಸುಮಾರಿಗೆ ನಮ್ಮನ್ನೆಲ್ಲಾ ಕರೆದು ಮಾದಿಗ ಜಾತಿಯವರು ಸಾಮೂಹಿಕ ಮದುವೆ ಕಾರ್ಯಕ್ರಮದಲ್ಲಿ ಮದುವೆಯಾಗುವುದು ಬೇಡಾ ನಿಮ್ಮ

ಕೇರಿಯಲ್ಲಿ ಮದುವೆ ಮಾಡಿಕೊಂಡು ನಂತರ ಜಾತ್ರೆಯಲ್ಲಿ ಊಟ ಮಾಡಿ ಎಂದು ಆರೋಪಿಗಳು ತಿಳಿಸಿದ್ದರು ಎಂದರೆ ಗೊತ್ತಿಲ್ಲ. ಜಾತ್ರೆಯಲ್ಲಿ ಯಾವುದೇ ಗಲಾಟೆ ಹಾಗೂ ಗೊಂದಲ ಆಗ ಬಾರದು ಎಂಬ ಕಾರಣಕ್ಕಾಗಿ ನಮ್ಮ ಕೇರಿಯ ಅಂಬೇಡ್ಕರ ಭವನದ ಬಳಿ ಪಂಡಾಲ ಹಾಕಿ ನಮ್ಮ ಜನಾಂಗದವರ ಮದುವೆ ಮಾಡಿಸಿದ್ದೆವು ಎಂದರೆ ಸರಿ. ಮದ್ಯಾಹ್ನ **12-00** ಗಂಟೆಗೆ ಆರೋಪಿಗಳು ಸಮುದಾಯದ ಬಳಿ ಬಂದಾಗ ಈ ರೀತಿ ಏಕೆ ಮಾಡಿದಿರಿ ನಮ್ಮ ಜನಾಂಗದವರ ಮದುವೆ ಸಾಮೂಹಿಕ ಮದುವೆಯಲ್ಲಿ ಏಕೆ ಮಾಡಿಸಲಿಲ್ಲ ಎಂದು ಕೇಳಿದಾಗ ಅವರು ನಮಗೆ ಸಿಟ್ಟಿನಿಂದ ಅವಾಚ್ಯವಾಗಿ ಬೈಯ್ದರು ಎಂದರೆ ಸರಿಯಲ್ಲ. ಅಲ್ಲದೇ ನಾವು ಹೇಳಿದ ಹಾಗೇ ಕೇಳಬೇಕು ಇಲ್ಲವಾದರೆ ನಿಮ್ಮನ್ನು ಜೀವಸಹಿತ ಬಿಡುವುದಿಲ್ಲ ಎಂದು ಜೀವ ಬದರಿಕೆ ಹಾಕಿದರು ಎಂದರೆ ಸರಿಯಲ್ಲ. ಊರಿನಲ್ಲಿ ಎಲ್ಲಾ ಮದುವೆಗಳನ್ನು ಒಟ್ಟಾಗಿ ನಡೆಸದೆ ಅಸ್ಪೃಷ್ಯತೆ ಆಚರಣೆ ಮಾಡಿರುತ್ತಾರೆ ಎಂದು ಆರೋಪಿಗಳ ವಿರುದ್ದ ನಾನು ಪೊಲೀಸರಿಗೆ ನಿಪಿ-**8** ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಊರಿನಲ್ಲಿ ಜಗಳ ಏಕೆ ಬೇಕು ಎಂಬ ಕಾರಣಕ್ಕಾಗಿ ನಾನು ನಿಜ ವಿಚಾರ ಮುಚ್ಚಿಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ವೈಜೆಆರ್ ವಕೀಲರಿಂದ

**3).** ನಮ್ಮ ಊರಲ್ಲಿ ಸಾರೆಮ್ಮ ದೇವಸ್ಥಾನದಲ್ಲಿ ನಮ್ಮ ಸಮುದಾಯದವರು ಮೊದಲಿನಿಂದಲೂ ಮದುವೆಗಳನ್ನು ಮಾಡುತ್ತಿದ್ದರು ಎಂದರೆ ಫಕೀರೇಶ್ವರ ದೇವಸ್ಥಾನದಲ್ಲಿ ಸಹಾ ಮದುವೆ ಮಾಡಿಕೊಳ್ಳುತ್ತಿದ್ದರು ಸಾಕ್ಷಿದಾರರು ನುಡಿದಿರುತ್ತಾರೆ. **6** ಮತು **8** ನೇ ಆರೋಪಿತರು ವಾಲ್ಮೀಕಿ ಸಮಾಜದವರು ಎಂದರೆ ಸರಿ. ಈಗ ನಾವು ಮತ್ತು ಆರೋಪಿಗಳು ಕೂಡಿಯೇ ಫಕೀರೇಶ್ವರ ದೇವಸ್ಥಾನದ ಬಳಿ ಮದುವೆ ಮಾಡಿಕೊಳ್ಳುತ್ತಿದ್ದು ಯಾವುದೇ ಜಗಳ ಇರುವುದಿಲ್ಲ ಎಂದರೆ ಸರಿ. **4** ಜೋಡಿಗಳ ಹೆಸರುಗಳನ್ನು ನಾನು ಹೇಳಿ ಬರೆಸಿರಲಿಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಕೊಪ್ಪಳ.